ಮೂಲ ದಾವಾ ನಂ. 107/2014

ಪಿ. ಡಬ್ಲುಃ 1

ಸಾಕ್ಷಿಯನ್ನು ದಿನಾಂಕ: 27-01-2023 ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ ಶ್ರೀ ಜಿ. ವಿ. ಬಿ. ವಕೀಲರಿಂದಃ**

ನಮಗೆ ಬರಬೇಕಾದ ಜಮೀನು ಬರದೇ ಇದ್ದ ಕಾರಣ ಅದರಿಂದ ನಮಗೆ ಮೋಸವಾಗಿರುತ್ತದೆ. 5 ನೇ ಪ್ರತಿವಾದಿ ನಮಗೆ ಮೋಸಮಾಡಿರುತ್ತಾನೆ. ಅವರು ನಮಗೆ ಸೇರಬೇಕಾಗಿದ್ದ ಜಮೀನು ನಮಗೆ ಕೊಡದೇ ಇದ್ದ ಕಾರಣ ನಮಗೆ ಮೋಸವಾಗಿರುತ್ತದೆ. 5 ನೇ ಪ್ರತಿವಾದಿ ನಮ್ಮ ತಂದೆಗೆ ಮೋಸಮಾಡಿರುತ್ತಾನೆ. ಈ ಬಗ್ಗೆ ನಾನು ನನ್ನ ತಂದೆಯನ್ನು ವಿಚಾರಿಸಿದಾಗ ಅವರೂ ಕೂಡಾ ನಮಗೆ ಮೋಸಮಾಡಿದ್ದಾರೆ ಎಂದು ಹೇಳಿರುತ್ತಾರೆ. ಅವರು ಯಾವ ದಾಖಲೆಯ ಮೂಲಕ ಮೋಸಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನಗೆ 20 ವರ್ಷವಾದಾಗಿನಿಂದ ನಾನು 5 ನೇ ಪ್ರತಿವಾದಿಯನ್ನು ನೋಡುತ್ತಾ ಬಂದಿದ್ದೇನೆ. ಅವರು ಮೂಲತಃ ಮಾಗೋಡನವರಾಗಿದ್ದು ಅವರು ನಮ್ಮ ಊರಿಗೆ ಬಂದಾಗ ಅವರನ್ನು ನೋಡಿರುತ್ತೇನೆ. ಅವರು ನಮ್ಮ ಊರಿಗೆ ಬಂದಾಗ ನಮ್ಮ ಜಮೀನಿನ ಪಕ್ಕದಲ್ಲಿ ಅವರು ವಾಸವಾಗಿರುತ್ತಾರೆ. ಅವರು ವಾಸ ಮಾಡಿದ ಜಮೀನು ನಮಗೆ ಸೇರಿದ್ದಾಗಿರುತ್ತದೆ. ಅವರಿಗೆ ಸದ್ರಿ ಜಮೀನನ್ನು ಯಾರು ಕೊಟ್ಟಿದ್ದರು ಎಂದು ನನಗೆ ಗೊತ್ತಿಲ್ಲ. ಈಗ 5 ನೇ ಪ್ರತಿವಾದಿ ವಾಸವಿರುವ ಮನೆಯಲ್ಲಿಯೇ ಮುಂಚಿನಿಂದಲೂ ಅವರು ವಾಸವಾಗಿದ್ದಾರೆ. ನನ್ನ ತಂದೆ ಅಣ್ಣ ತಮ್ಮಂದಿರುವ ಒಟ್ಟೂ ಮೂರು ಜನ ಅವರು ಯಾರೆಂದರೆ ಬೈರಾ, ನನ್ನ ತಂದೆ ರಾಮಚಂದ್ರ ಮತ್ತು ಚಿಕ್ಕಪ್ಪ ಕೃಷ್ಣಪ್ಪ. ಅವರೆಲ್ಲರೂ ಮೊದಲು ಒಂದೇ ಮನೆಯಲ್ಲಿ ವಾಸವಿದ್ದರು ಎಂದರೆ ಸರಿ . ನಂತರ ಇಬ್ಬರು ಬೇರೆ ಮನೆ ಕಟ್ಟಿರುತ್ತಾರೆ ಎಂದರೆ ಸರಿ . ಯಾವ ಇಸವಿಯಲ್ಲಿ ಕಟ್ಟಿದ್ದಾರೆ ಎಂದು ನನಗೆ ಗೊತ್ತಿಲ. ಮೂಲ ಮನೆಯಲ್ಲಿ ಚಿಕ್ಕಪ್ಪ ಕೃಷ್ಣಪ್ಪ ಇದ್ದರು. ಅವರು ಯಾವ ವರ್ಷದಲ್ಲಿ ಪಾಲು ಮಾಡಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

ನನ್ನ ತಂದೆ ಮತ್ತು ನನ್ನ ಚಿಕ್ಕಪ್ಪ ಅಗ್ರಿಮೆಂಟ್ ಮಾಡಿ 5 ನೇ ಪ್ರತಿವಾದಿಯ ಅಣ್ಣ ಶ್ರೀಧರನಿಗೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ಆ ರೀತಿ ಅವರಿಗೆ ಜಮೀನನ್ನು ಕೊಟ್ಟ ಮೇಲೆ ಅವರು 1983 ನೇ ಇಸವಿಯಿಂದ ಸದ್ರಿ ಜಮೀನಿನಲ್ಲಿಯೇ ವಾಸವಿದ್ದಾರೆ ಎಂದರೆ ಸರಿಯಲ್ಲ. ಸದ್ರಿ ಅಗ್ರಿಮೆಂಟ್ ಜೊತೆಗೆ ನನ್ನ ತಂದೆ ಮತ್ತು ಚಿಕ್ಕಪ್ಪ ಒಂದು ಪವರ್ ಆಪ್ ಅಟಾರ್ನಿ ಮಾಡಿಕೊಟ್ಟಿದ್ದರು ಎಂದರೆ ಸರಿಯಲ್ಲ. ಸದ್ರಿ ಅಗ್ರಿಮೆಂಟ್ ಮತ್ತು ಪವರ್ ಆಪ್ ಅಟಾರ್ನಿ ಆಧಾರದ ಮೇಲೆ ಪಿ.ಎಲ್.ಡಿ ಬ್ಯಾಂಕಿನಲ್ಲಿ 5 ನೇ ಪ್ರತಿವಾದಿ ಸಾಲ ಪಡೆದಿದ್ದ ಎಂದರೆ ನನಗೆ ಗೊತ್ತಿಲ್ಲ . ಸಾಲ ತೀರಿಸಲು ಆಗದೇ ಜಮೀನು ಹರಾಜಿಗೆ ಬಂದಿತ್ತು ಎಂದರೆ ನನಗೆ ಗೊತ್ತಿಲ್ಲ. ನಂತರ ಶ್ರೀಧರ ನಾಯ್ಕ ರೇ ಹಣ ಕೊಟ್ಟು ಸದ್ರಿ ಆಸ್ತಿಯನ್ನು ಬಿಡಿಸಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದ್ರಿ ಕ್ರಯಪತ್ರದ ಆಧಾರದ ಮೇಲೆ ನನ್ನ ತಂದೆಯೇ 5 ನೇ ಪ್ರತಿವಾದಿಗೆ ದಸ್ತಾವೇಜನ್ನು ಮಾಡಿಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ಕುಟುಂಬದ ಎಲ್ಲಾ ಜಮೀನುಗಳು ಭೂನ್ಯಾಯ ಮಂಡಳಿಯಿಂದ ಮಂಜೂರಾದ ಜಮೀನುಗಳು ಎಂದರೆ ಸರಿ . ಅದರ ವರ್ಗಾವಣೆ ನಿರ್ಬಂಧಿಸಿದ ಕಾರಣ ಅವಧಿ ಮುಗಿದ ಮೇಲೆ 5 ನೇ ಪ್ರತಿವಾದಿ ಪರವಾಗಿ ಕ್ರಯದಸ್ತಾವೇಜು ಮಾಡಿಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಕ್ರಯದಸ್ತಾವೇಜಿನ ಆಧಾರದ ಮೇಲೆ 5 ನೇ ಪ್ರತಿವಾದಿ ಪರ ಮ್ಯುಟೇಷನ್ ಎಂಟ್ರಿ ಬದಲಾವಣೆಯಾಗಿದ್ದು ಆ ಬಗ್ಗೆ ನನ್ನ ತಂದೆಗೆ ನೋಟಿಸು ಬಂದಿದ್ದು ನಂತರ ಕಂದಾಯ ದಾಖಲೆಗಳು ಬದಲಾವಣೆಯಾಗಿರುತ್ತವೆ ಎಂದರೆ ನನಗೆ ಗೊತ್ತಿಲ್ಲ. ಆ ನಂತರ 5 ನೇ ಪ್ರತಿವಾದಿ ಮತ್ತು ಅವನ ಸಹೋದರರ ಮಧ್ಯೆ ನೋಂದಾಯಿತ ಹಿಸ್ಸಾಪತ್ರ ಆಗಿದ್ದು ಆ ಕುರಿತು ಕೂಡಾ ಕಂದಾಯ ದಾಖಲೆಗಳು ಬದಲಾವಣೆಯಾಗಿರುತ್ತವೆ ಎಂದರೆ ನನಗೆ ಗೊತ್ತಿಲ್ಲ. ಈ ಎಲ್ಲಾ ಮಾಹಿತಿಗಳನ್ನು 5 ನೇ ಪ್ರತಿವಾದಿ ಹಾಕಿರುವ ಉದಾಹರಣೆಯಲ್ಲಿ ಓದಿ ನೋಡಿರುತ್ತೇನೆ.

ನನ್ನ ತಂದೆಗೆ ಸರಳಗಿ ಗ್ರಾಮದಲ್ಲಿ ಈಗ ಯಾವದೇ ಜಮೀನು ಇರುವುದಿಲ್ಲ. 5 ನೇ ಪ್ರತಿವಾದಿಗೆ ದಾವಾ ಆಸ್ತಿಯನ್ನು ಕೊಟ್ಟ ಮೇಲೆ ಸರಳಗಿ ಗ್ರಾಮದಲ್ಲಿ ನನ್ನ ತಂದೆಗೆ ಬೇರೆ ಆಸ್ತಿ ಇತ್ತು. ಸದ್ರಿ ಜಮೀನುಗಳು ಈಗ ಇರುವುದಿಲ್ಲ. ಸದ್ರಿ ಜಮೀನನ್ನು ನನ್ನ ತಂದೆ 2012 ನೇ ಇಸವಿಯಲ್ಲಿ ರವೀಂದ್ರ ಎನ್ನುವವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ . ಸದ್ರಿ ದಸ್ತಾವೇಜಿಗೆ ನಾನು ಮತ್ತು ಸಹೋದರಿಯರು ಸಹಿ ಮಾಡಿರುತ್ತೇವೆ ಎಂದರೆ ಸರಿ. ಆ ನಂತರ ನನ್ನ ತಂದೆ ಇದ್ದಂತಹ ಮನೆ ಕೂಡಾ ಮಾರಾಟವಾಗಿದ್ದು ಅದರಲ್ಲಿ ಈಗ ರವೀಂದ್ರ ವಾಸವಿದ್ದಾರೆ ಎಂದರೆ ಸರಿ. ಈಗ ನನ್ನ ತವರು ಮನೆಯವರಿಗೆ ಯಾವದೇ ಆಸ್ತಿ ಇಲ್ಲ ಎಂದರೆ ಸರಿ.

(ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ವಕೀಲರು ಸಮಯ ಕೇಳಿದ್ದು ಸಮಯ ನೀಡಲಾಯಿತು )

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

Sd/-

ಪ್ರಧಾನ ಸಿವಿಲ್ ನ್ಯಾಯಾಧೀಶರು, ಹೊನ್ನಾವರ.